**ಸಾಕ್ಷಿಗೆ ದಿನಾಂಕ:28-04-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಮುಖ್ಯ ವಿಚಾರಣೆ :: ಪ್ರತಿವಾದಿ ಪರ ಶ್ರೀಮತಿ ಹೆಚ್ ಬಿ ವಕೀಲರಿಂದ ::**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರವನ್ನು ಈಗಾಗಲೇ ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ವಿಷಯಗಳು ಸರಿಯಾಗಿದ್ದು, ನಾನೇ ಓದಿ ತಿಳಿದು ಸಹಿ ಮಾಡಿರುತ್ತೇನೆ.

ಮುಂದುವರೆದು ಈ ಪ್ರಕರಣದಲ್ಲಿ ನಾನು ಹಾಜರುಪಡಿಸಿರುವ ದಾಖಲೆಗಳನ್ನು ಈಗ ನೋಡುತ್ತಿದ್ದೇನೆ, ಅವುಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

| Sl.No. | Documents | Exhibits |
|---|---|---|
| 1 | 1 ನಕ್ಷೆಯ ದೃಡೀಕೃತ ನಕಲು | Ex.D-2 |
| 2 | ಕ್ರಯಪತ್ರದ ದೃಡೀಕೃತ ನಕಲು | Ex.D-3 |
| 3 | Assessment Register Extract ನ ದೃಡೀಕೃತ ನಕಲು | Ex.D-4 |
| 4 | 1 Demand Register Extract ನ ದೃಡೀಕೃತ ನಕಲು | Ex.D-5 |
| 5 | ನಮೂನೆ 3 ರ ದೃಡೀಕೃತ ನಕಲು | Ex.D-6 |
| 6 | SAS ನಮೂನೆಯ ದೃಡೀಕೃತ ನಕಲು | Ex.D-7 |
| 7 | ಪೊಲೀಸರು ನೀಡಿರುವ ಸ್ವೀಕೃತಿ ಮತ್ತು ಹಿಂಬರಹದ ದೃಡೀಕೃತ ನಕಲು | Ex.D-8 ಮತ್ತು 9 |
| 8 | ದಿನಾಂಕ 01.04.2022 ರ ಸರ್ಕಾರಿ ಆದೇಶದ ದೃಡೀಕೃತ ನಕಲು | Ex.D-10 |
| 9 | ಅಸಲು ದಾವಾ 131/2012 ಗೆ ಸಂಬಂಧಪಟ್ಟ ಅದೇಶ ಪುಟ, ವಾದ ಪತ್ರ, ಪ್ರತಿವಾದ ಪತ್ರ, ರಾಜೀ ಅರ್ಜಿ, ಡಿಕ್ರಿಗಳ ದೃಡೀಕೃತ ನಕಲು | Ex.D-11 ರಿಂದ 15 |
| 10 | ಅಸಲು ದಾವಾ 230/2011 ಗೆ ಸಂಬಂಧಪಟ್ಟ ಅದೇಶ ಪುಟ, ಡಿಕ್ರಿ, ಪ್ರಾಸಾ 1 ರವರ ಸಾಕ್ಷಿ ವಿಚಾರಣೆ, ಮತ್ತು DW1 ರವರ ಸಾಕ್ಷಿ ವಿಚಾರಣೆಯ ದೃಡೀಕೃತ ನಕಲು | Ex.D-16 ರಿಂದ 19 |

ಆದುದರಿಂದ ಪ್ರತಿವಾದ ಪತ್ರದಲ್ಲಿ ಕೋರಿಕೊಂಡಂತೆ ದಾವೆಯನ್ನು ವಜಾ ಮಾಡಿಕೊಡಬೇಕೆಂದು ಕೋರಿಕೊಳ್ಳುತ್ತೇನೆ.

**:: ಪಾಟೀಸವಾಲು :: ವಾದಿ ಪರ ಶ್ರೀ. SNR ವಕೀಲರಿಂದ ::**

ನಾನು ಹಾಜರುಪಡಿಸಿರುವ ಲೇಔಟ್ ಪ್ಲಾನ್ ನಲ್ಲಿ 67 ಸಂಖ್ಯೆ ಇರುವ ನಿವೇಶನ ಎಲ್ಲಿ ಇರುತ್ತದೆ ಎಂದು ನನಗೆ ತಿಳಿದಿರುತ್ತದೆ. ಸದರಿ ದಾಖಲೆಯಲ್ಲಿ ನಿವೇಶನಗಳಾಗಿ ವಿಂಗಡಣೆ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ದಾಖಲೆಯಲ್ಲಿ ನಮ್ಮ ಲೇಔಟ್ approval ಆಗಿರುವುದು ಕಂಡು ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಯಲ್ಲಿ 67 ಸಂಖ್ಯೆ ಇರುವ ನಿವೇಶನದ ಉತ್ತರಕ್ಕೆ government land for road widening purpose ಎಂದು ನಮೂದು ಇರುತ್ತದೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ನಿವೇಶನ ಸಂಖ್ಯೆ 67 ರಿಂದ ಬಿ ಹೆಚ್ ರಸ್ತೆಗೆ 104 ಅಡಿ ಜಾಗ ಇರುವುದಾಗಿ ನಮೂದು ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ನಾನು ಹಾಜರುಪಡಿಸಿರುವ ಕ್ರಯಪತ್ರದಲ್ಲಿ ನನ್ನ ಜಾಗದ ಉತ್ತರಕ್ಕೆ ನಿವೇಶನ ಸಂಖ್ಯೆ 67 ರ ಪೈಕಿ ಉಳಿಕೆ ಜಾಗ ಇರುತ್ತದೆ ಎಂದು ನಮೂದು ಇರುತ್ತದೆ ಎಂದರೆ ಸರಿ. ಆದಕಾರಣ ನಾನು ನನ್ನ ವಾದ ಪತ್ರದಲ್ಲಿ ಹೇಳುತ್ತಿರುವಂತೆ ನನ್ನ ಜಾಗದ ಉತ್ತರಕ್ಕೆ ಬಿ ಹೆಚ್ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ನಿವೇಶನದ ವಿಸ್ತೀರ್ಣ 30 x 40 ಅಡಿಗಳಾಗಿರುತ್ತದೆ ಎಂದರೆ ಸರಿ. ಸದರಿ ವಿಸ್ತೀರ್ಣ ಹೊರತುಪಡಿಸಿ ಬೇರೆ ಜಾಗದ ಮೇಲೆ ನಮಗೆ ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿ. ನಾನು ಹಿಂದೆ ರಜಾ ಕಾಲಿನ ನ್ಯಾಯಾಲಯದಲ್ಲಿ ಹಾಕಿರುವ ದಾವೆಯ ಬಗ್ಗೆ ತಿಳಿದಿರುತ್ತದೆ ಆದರೆ ಅದರಲ್ಲಿ ಆಗಿರುವ ಆದೇಶದ ಬಗ್ಗೆ ನನಗೆ ಗೊತ್ತಿಲ್ಲ.

ನಾನು ಹಿಂದೆ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ 344/2018 ಮತ್ತು 345/2018 ದಾವೆಗಳಲ್ಲಿ ಪ್ರಾಸಾ 1 ಆಗಿ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ. ಸದರಿ ಸಾಕ್ಷಿ ವಿಚಾರಣೆಯಲ್ಲಿ ನಾನು ಹೇಳಿರುವ ವಿಚಾರಗಳು ನನ್ನ ಪ್ರಕಾರ ಸರಿ ಇರುತ್ತವೆ. ಸಾಕ್ಷಿಗೆ ಅಸಲು ದಾವಾ 344/2018 ಮತ್ತು 345/2018 ರ ಅವರ ಪಾಟೀ ಸವಾಲಿನ ದೃಡೀಕೃತ ನಕಲುಗಳನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಒಪ್ಪಿದ ಮೇರೆಗೆ ಅದನ್ನು ನಿಪಿ32 ಮತ್ತು 33 ಎಂದು ಗುರುತಿಸಲಾಯಿತು.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: